ಒಳ್ಳೆಯ ವೆಪನ್ ಕೊಡಬೇಕಾಗುತ್ತದೆ, ಅದಕ್ಕೋಸ್ಕರ ಪೊಲೀಸ್ ಇಲಾಖೆಯನ್ನು ಅಪ್ ಗ್ರೇಡ್ ಮಾಡಲಿಕ್ಕೆ ಹೊಸ ಹೊಸ ವೆಪನ್ಸ್ ತರಿಸಿಕೊಡಬೇಕಾಗುತ್ತದೆ. ಲೈವ್‌ಬ್ಯಾಂಡ್ ಬಗ್ಗೆ ಹೇಳುವುದಾದರೆ, ಮಾನ್ಯ ಸಿಂಧ್ಯಾರವರು ಇಲ್ಲಿಯೇ ಕುಳಿತಿದ್ದಾರೆ, ನನಗೆ ನೆನಪಿದೆ, ಅವರು ಗೃಹ ಸಚಿವರು ಆಗಿದ್ದಂಥ ಕಾಲದಲ್ಲಿ ಇದನ್ನು ನಿಲ್ಲಿಸುವ ಪ್ರಯತ್ನ ಮಾಡಿದ್ದರು. ಒಂದು ಹಂತದಲ್ಲಿ ಇದನ್ನು ಸಂಪೂರ್ಣ ನಿಲ್ಲಿಸಿದ್ದರು. ಅದನ್ನು ತಾವು ಯಾವ ರೀತಿಯಲ್ಲಿ ನಿಲ್ಲಿಸಿದಿರಿ ಎಂಬ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ ಪುನಃ ಲೈವ್ ಬ್ಯಾಂಡನ್ನು ನಿಲ್ಲಿಸುವಂಥ ವ್ಯವಸ್ಥೆ ಮಾಡಿ. ಲೈವ್‌ಬ್ಯಾಂಡಿನಿಂದಾಗಿಯೇ ರಾತ್ರಿ ಅನೇಕ ದುರ್ಘಟನೆಗಳು ನಡೆಯುತ್ತಿವೆ. ತಾವು ಯಾವ ರೀತಿಯಲ್ಲಿ ಕ್ರಮವನ್ನು ಕೈಗೊಂಡಿರಿ ಅದನ್ನು ಮುಂದುವರಿಸುವ ಪ್ರಯತ್ನವನ್ನು ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದು ಏನೆಂದರೆ, ಈಗ ಸದನ ನಡೆಯುತ್ತದೆ, ಪತ್ರಿಕೆಗಳಲ್ಲಿ ದೊಡ್ಡದೊಡ್ಡದಾಗಿ ಈ ಪಾವಗಡದ ಬಗ್ಗೆ ಬರುತ್ತದೆ, ಇದರ ಬಗ್ಗೆ ತಾವು ಹೇಳಿಕೆ ನೀಡಬೇಕಾಗುತ್ತದೆ. ಪಾವಗಡದಲ್ಲಿ ಏನಾಗಿದೆ? ಅಲ್ಲಿ ಬಾಂಬ್ ಇರುವುದು ಪತ್ತೆಯಾಯಿತು, ತಾವು ಅಲ್ಲಿಗೆ ಹೋಗತಕ್ಕಂಥದ್ದು ರದ್ದು ಆಯಿತು, ಹೀಗೆ ಅನೇಕ ವಿಷಯಗಳು ಇವೆ, ಈ ಎಲ್ಲಾ ಪ್ರಕರಣಗಳು ಪತ್ರಿಕೆಗಳಲ್ಲಿ ಬರುತ್ತಿದೆ. ಒಂದು ರೀತಿಯಲ್ಲಿ ಈ ಸದನಕ್ಕೆ ಯಾವ ವಿಚಾರವೂ ಗೊತ್ತಾಗುತ್ತಿಲ್ಲ, ಇದೇನು ವಿಚಾರ ಎನ್ನುವುದನ್ನು ತಾವು ಸದನದ ಮುಂದೆ ತಿಳಿಸಬೇಕು. ಇದರ ಬಗ್ಗೆ ತಾವು ಹೇಳಿಕೆ ಕೊಡಬೇಕು. ಇದಕ್ಕೆ ಹೇಳಿಕೆ ಕೊಡುವುದಕ್ಕೆ ಮೂರು ದಿವಸವಾಗುತ್ತದೆ. ಅದು ಬೇರೆ. ತಾವು ಕೇವಲ ಪಾವಗಡದ ಬಗ್ಗೆ ಮಾತ್ರ ಹೇಳಿ, ಅಷ್ಟಕ್ಕೆ ಮಾತ್ರ ಹೇಳಿ, ಏಕೆ ಏನಾಯಿತು? ಅಲ್ಲಿ ಬಾಂಬ್‌ಗಳನ್ನು ಏಕೆ ಇಟ್ಟಿದ್ದರು? ಕಾರಣ ಏನು? ಅದರ ಬಗ್ಗೆ ತನಿಖೆ ಏನು? ಏಕೆಂದರೆ ಇದು ಬಹಳ ಪ್ರಾಮುಖ್ಯವಾದ ವಿಚಾರ. ನಿನ್ನೆ ಮೊನ್ನೆ ಪತ್ರಿಕೆಗಳಲ್ಲಿ ಇದರ ಬಗ್ಗೆ ಬಹಳ ದೊಡ್ಡದಾಗಿ ಮುಖಪುಟದಲ್ಲಿ ಎಲ್ಲಾ ಕಡೆ ಬಂದಿದೆ. ಒಂದು ರೀತಿ ಭಯ ಭೀತಿಯ ಪರಿಸ್ಥಿತಿ ಉದ್ಭವವಾಗಿದೆ. ಸದನಕ್ಕೆ ಆ ವಿಚಾರವೇ ಪ್ರಸ್ತಾಪವಾಗಿಲ್ಲ, ಆದುದರಿಂದ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳೇ ಹೇಳಬೇಕಾಗಿತ್ತು, ಸದನಕ್ಕೆ ಬಂದ ತಕ್ಷಣ ತಾವು ಸರ್ಕಾರದ ಪರವಾಗಿ ಒಂದು ಹೇಳಿಕೆಯನ್ನು ಮಂಡಿಸಬೇಕಾಗಿತ್ತು, ಏಕೆಂದರೆ, ಇದು ಬಹಳ ಪ್ರಾಮುಖ್ಯ, ದಯಮಾಡಿ ತಾವು ಮಂಡಿಸಬೇಕೆಂದು ಕೋರುತ್ತೇನೆ. ಅಲ್ಲಿ ಏನಾಯಿತು. ಅಲ್ಲಿ ಏನು ನಡೆದಿದೆ, ಅಲ್ಲಿ ಏನು ಸತ್ಯ ಅದರ ಬಗ್ಗೆ ಹೇಳಿ, ಪಾಪ ತಾವು ಅಲ್ಲಿಗೆ ಹೋಗುತ್ತಿದ್ದೀರಿ, ಕಾರ್ಯಕ್ರಮ ನಿಂತು ಹೋಯಿತು, ಕಾರಣ ಏನು? ಅಲ್ಲಿ ಬಾಂಬ್ ಹಾಕಿದ್ದರ ಬಗ್ಗೆ ತನಿಖೆ ಯಾವ ಮಟ್ಟದಲ್ಲಿ ಇದೆ, ಅದು ಎಲ್ಲಿಯವರೆಗೆ ಬಂದಿದೆ? ಇದು ಬಹಳ ಮುಖ್ಯವಾದ ವಿಚಾರ,

ರಾಜ್ಯದ ಜನತೆಗೆ ಬಹಳ ಪ್ರಾಮುಖ್ಯವಾದ ವಿಚಾರ. ಎಲ್ಲಾ ಪತ್ರಿಕೆಗಳಲ್ಲಿ ಮುಖಪುಟದಲ್ಲಿ ಈ ವಿಚಾರದಲ್ಲಿ ಬಂದಿದೆ, ಈ ಸದನ ಕತ್ತಲೆಯಲ್ಲಿ ನಾವು ಇದ್ದೇವೆ, ನಮಗೆ ಯಾರಿಗೂ ಅರ್ಥವಾಗಲಿಲ್ಲ, ಸದನಕ್ಕೆ ತಾವು ತಿಳಿಸಬೇಕು, ಅದು ತಮ್ಮ ಕರ್ತವ್ಯ ಕೂಡ, ದಯಮಾಡಿ ತಾವು ತಿಳಿಸಬೇಕು. ಇದು ಬಹಳ ಪ್ರಾಮುಖ್ಯವಾದ ವಿಚಾರವಾಗಿರುವುದರಿಂದ ಸದನಕ್ಕೆ ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ಏಕೆಂದರೆ, ಎಲ್ಲಾ ಪತ್ರಿಕೆಗಳಲ್ಲಿ ಮುಖಪುಟದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೋಗುತ್ತಿದ್ದರು, ಅಲ್ಲಿ ಬಾಂಬ್ ಬ್ಲಾಸ್ಟ್ ಆಗಿದೆ, ಕಾರಣ ಏನು? ಮುಖ್ಯಮಂತ್ರಿಗಳು ಹಿಂದಕ್ಕೆ ಬಂದರು ಇದಕ್ಕೆ ಕಾರಣ ಏನು? ಪುನಃ ಅಲ್ಲಿಗೆ ಹೋಗಲಿಕ್ಕೆ ಆಗಲಿಲ್ಲ, ಮುಂದಿನ ಪರಿಸ್ಥಿತಿಗಳೇನು? ಅಲ್ಲಿ ಕಾನೂನು ಸುವ್ಯವಸ್ಥೆ ಏನು ಎಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬೆಳಕನ್ನು ಚೆಲ್ಲಬೇಕು. ಅಲ್ಲಿ ಏನು ನಡೆದಿದೆ ಎಂಬುದನ್ನು ತಾವು ಸದನಕ್ಕೆ ತಿಳಿಸಬೇಕು ಅಲ್ಲವೇ? ತಾವು ಹೇಳಲೇ ಇಲ್ಲ.

ಅಧ್ಯಕ್ಷರು : ತಾವು ದಯಮಾಡಿ ಇಲ್ಲಿ ಕೇಳಿ, ಈಗ ಎತ್ತೀಯ ಕಾರ್ಯಕಲಾಪ ನಡೆಯುತ್ತಿದೆ, ಮಾನ್ಯ ಹೆಗಡೆಯವರು ಮಾತನಾಡುತ್ತಿದ್ದಾರೆ, ನೀವು ಈಗ ಗಮನಕ್ಕೆ ತಂದಿದ್ದೀರಿ, ಅವರು ಸೂಕ್ತ ಸಮಯದಲ್ಲಿ ಉತ್ತರ ಕೊಡುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಗೃಹ ಸಚಿವರು ಅವರೇ ಆಗಿದ್ದಾರೆ, ಈ ವಿಚಾರವನ್ನು ಸದನಕ್ಕೆ ಮುಚ್ಚಿಡುವುದಕ್ಕೆ ಆಗುವುದಿಲ್ಲ, ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಇದರ ಬಗ್ಗೆ ಹೇಳಿಕೆ ಕೊಡಲೇಬೇಕು. ಏನು ನಡೆದಿದೆ ಎಂದು ಹೇಳಲಿ.

ಅಧ್ಯಕ್ಷರು : ಅವರು ಕೊಡುತ್ತಾರೆ ಕುಳಿತುಕೊಳ್ಳಿ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಅವರು ಈಗ ಹೇಳುತ್ತಾರೋ ಕೊನೆಯಲ್ಲಿ ಹೇಳುತ್ತಾರೋ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರು ಸದನಕ್ಕೆ ಬೇಕಾದರೆ ಅವರ ಬಾಷಣ ಮುಗಿದ ಮೇಲೆ ಹೇಳಲಿ ಅದಕ್ಕೆ ನನ್ನ ಅಭ್ಯಂತರ ಇಲ್ಲ, ಸದನಕ್ಕೆ ಏನು ನಡೆದಿದೆ ಎಂದು ತಾವು ಹೇಳಿಕೆ ಕೊಡಿ.

ಅಧ್ಯಕ್ಷರು : ಅವರು ಹೇಳುತ್ತಾರೆ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ನಮಗೂ ಕೂಡ ಆ ಬಗ್ಗೆ ಗೊತ್ತಾಗಬೇಕಾಗುತ್ತದೆ.

ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ, ಅವರು ಭಾಷಣ ಮುಗಿಸಲಿ, ಮಾನ್ಯ ಹೆಗಡೆಯವರೆ ತಾವು ಮಾತನಾಡಿ, ಸಮಯವಾಯಿತು, ತಾವು ಮಾತನಾಡಿ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ನನ್ನ ಭಾಷಣ ಮುಗಿದ ತಕ್ಷಣ ಆಗಲಿ ಎಂದು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ತಾವು ಈಗ ರಾಜ್ಯದ ಮುಖ್ಯಮಂತ್ರಿಗಳು, ತಾವು ನನಗೆ ಹೀಗೆ ಹೇಳಿದರೆ ಹೇಗೆ? ಸದನಕ್ಕೆ ಗೊತ್ತಾಗಬೇಕು ಅಲ್ಲವೆ?

ಅಧ್ಯಕ್ಷರು : ನೀವು ಕುಳಿತುಕೊಳ್ಳಿ, ಅವರು ಉತ್ತರ ಕೊಡುತ್ತಾರೆ, ನೀವು ಕುಳಿತುಕೊಳ್ಳದೆ ನಿಂತುಕೊಂಡಿದ್ದರೆ ಅವರು ಉತ್ತರ ಕೊಡುತ್ತಾರಾ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಪ್ರಶ್ನೋತ್ತರ ಮುಗಿದ ಮೇಲೆ ಶೂನ್ಯ ವೇಳೆಯಲ್ಲಿ ಕೇಳಿದ್ದರೆ ನಾನು ಒಪ್ಪುತ್ತಿದ್ದೆ, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಮಾತನಾಡುತ್ತಿದ್ದಾರೆ, ಬಜೆಟ್ ಮೇಲೆ ಚೆನ್ನಾಗಿ ಮಾತನಾಡುತ್ತಿದ್ದಾರೆ. ತಮಗೆ ಗೊತ್ತಿದ್ದ ಹಾಗೆ ಇವರು ವಾಟಾಳ್ ನಾಗರಾಜ್‌ರವರು ಎದ್ದು ಬಿಡುತ್ತಾರೆ, ಈಗ ಪಾವಗಡಕ್ಕೆ ಹೋಗಬಾರದು ಎನ್ನತಕ್ಕಂಥದ್ದು ಇಲ್ಲವೇ ಇಲ್ಲ. ೧೯೯೦ರಲ್ಲಿ ನಾನು ಗೃಹಸಚಿವ ಆಗಿದ್ದಾಗ ಪಾವಗಡಕ್ಕೆ ಹೋಗಿ ವೆಟರಿನರಿ ಆಸ್ಪತ್ರೆ ಓಪನ್ ಮಾಡಿದ್ದೇನೆ. ಆಗ ವೆಂಕಟರಮಣರವರು ಶಾಸಕರಾಗಿದ್ದರು, ಪಾವಗಡಕ್ಕೆ ಹೋಗಬೇಕೆನ್ನುವ ಭೀತಿ ಏನೂ ಇಲ್ಲ, ಇವತ್ತು ಅಲ್ಲಿ ಏನಾಗಿದೆ ಎಂದರೆ, ಇದು ಇಂಟರ್‌ಸ್ಟೇಟ್, ಇವತ್ತು ಪಾವಗಡದಲ್ಲಿಂದ ಎರಡು ಕಿಲೋ ಮೀಟರ್ ದೂರದಲ್ಲಿ ಆಂಧ್ರಪ್ರದೇಶ ಇದೆ. ಅಲ್ಲಿಂದಲೂ ನಮ್ಮನ್ನು ಸಂಪರ್ಕಿಸಿದರು, ಈಗಿರುವ ಪರಿಸ್ಥಿತಿಯಲ್ಲಿ ನಾವು ಭೇಟಿ ಕೊಡುವುದು ಸರಿಯಲ್ಲ ಎನ್ನತಕ್ಕಂಥ ರೀತಿಯಲ್ಲಿ ಇದ್ದಾಗ ನಾವು ಅದನ್ನು ಮುಂದಕ್ಕೆ ಹಾಕಿದೆವು. ನಿನ್ನೆ ಕೂಡ ನಾನು ತುಮಕೂರಿಗೆ ಹೋಗಿದ್ದೆ, ಅಲ್ಲಿ ನಾನು ಹೇಳಿದ್ದೇನೆ, ನಾನು ವೆಂಕಟಮ್ಮಹಳ್ಳಿಗೆ ಭೇಟಿ ಕೊಡುತ್ತೇನೆ ಅದರಲ್ಲಿ ಬೇರೆ ಏನು ಕಾರಣ ಇಲ್ಲ, ಚಾಮರಾಜನಗರಕ್ಕೆ ಬರಬೇಕೆಂದು ಆಗ ಹೇಳಿದಿರಿ, ನಾನು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾಗಿ ಬರಲಿಲ್ಲವೆ, ಆಗ ನನಗೆ ಏನಾಯಿತು? ಅದನ್ನು ಹೇಳುತ್ತೇನೆ, ೧೯೬೩ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಚಿವನಾಗಿದ್ದಾಗ ನಿಮ್ಮಲ್ಲಿಗೆ ಕೂಡ ಬಂದಿದ್ದೇನೆ, ನನಗೆ ಇದರ ಮೇಲೆ ವಿಶ್ವಾಸ ಇಲ್ಲ, ನಿನ್ನೆ ಕೂಡ ಅಲ್ಲಿಗೆ ಉಸ್ತುವಾರಿ ಸಚಿವರು ಹೋಗಿದ್ದಾರೆ ಅಭಿವೃದ್ಧಿ ಕಾರ್ಯಗಳ ಬಗ್ಗೆ ಚರ್ಚಿಸಿದ್ದಾರೆ, ನಮ್ಮ ಅಧಿಕಾರಿಗಳು ಕೂಡ ಅಲ್ಲಿಗೆ ಹೋಗಿ ಬೇಟಿ ಮಾಡಿದ್ದಾರೆ, ಎಲ್ಲಾ ಸರಿಯಾಗಿ ನಡೆಯುತ್ತಿದೆ, ರಾಜ್ಯದಲ್ಲಿ ಆಗತಕ್ಕಂಥ ಪ್ರತಿಯೊಂದು ಘಟನೆಗಳಾದ ಸ್ಥಳಕ್ಕೆ ಮುಖ್ಯಮಂತ್ರಿಗಳು ಹೋಗಬೇಕೆಂದಿಲ್ಲ, ಆದರೂ ಜನರಲ್ಲಿ ಭಯ ಭೀತಿಯ ಬಗ್ಗೆ

ವಿಶ್ವಾಸ ಮೂಡತಕ್ಕಂಥ ರೀತಿಯಲ್ಲಿ ನಾನು ಹೋಗಬೇಕು, ನಾನು ಹೋಗುತ್ತಿದ್ದೇನೆ, ಕೆಲಸ ನಡೆಯುತ್ತಿದೆ, ಪತ್ರಿಕೆಗಳಲ್ಲಿ ದೊಡ್ಡದಾಗಿ ಬಂದರೂ ಯಾವ ತರಹದ ಮಾತಿಗೂ ತಾವು ಓಗೊಡತಕ್ಕದ್ದಲ್ಲ ಸರ್ಕಾರ ಎಲ್ಲಾ ತರಹದ ವ್ಯವಸ್ಥೆ ಮಾಡುತ್ತದೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಅದಕ್ಕೆ ಮೊನ್ನೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಸದನ ಸಮಿತಿ ಅಲ್ಲಿಗೆ ಕಳುಹಿಸಿ ನಂತರ ನೀವು ಹೋಗಿ ಎಂದು ಕೇಳಿದೆ. ಅದಕ್ಕೆ ಅವರು ಒಪ್ಪಲಿಲ್ಲ. ನೀವು ವೆಂಕಟಮ್ಮನಳ್ಳಿಗೆ ಹೋದರೂ ಅಡ್ಡಿಯಿಲ್ಲ ಚಾಮರಾಜನಗರಕ್ಕೆ ಹೋಗಬೇಡಿ... ಅಯ್ಯೋ ಹಿಂದೆ ನಾವು ಎಲ್ಲಾ ಕೇಳಿದ್ದೇನೆ, ಅದರಿಂದ ಹೋಗಬೇಡಿ. ಅವರು ಸ್ವಲ್ಪ ದಿವಸ ಮುಂದುವರಿಯಲಿ ಎಂಬುದೇ ನಮ್ಮ ಇಚ್ಛೆ.

ಶ್ರೀ ವಾಟಾಳ್ ನಾಗರಾಜ್ : ಏಕೆ ಆಕ್ಷೇಪ ಮಾಡುತ್ತೀರಿ? ಅಲ್ಲಿಗೆ ಏಕೆ ಹೋಗಬಾರದು? ಇದು ನನಗೆ ಅರ್ಥವಾಗಲಿಲ್ಲ, ನೀವು ಅದನ್ನು ಹೇಳಬೇಕು, ಸರಕಾರ ಉಳಿಯಲು ಅದರ ಬಗ್ಗೆ ನನ್ನದೇನೂ ಇಲ್ಲ, ಆದರೆ ಚಾಮರಾಜನಗರಕ್ಕೆ ಬಂದರೆ ಸರ್ಕಾರ ಹೋಗುತ್ತದೆ ಎಂದರೆ ಅಂಥ ಅನಾಗರೀಕವಾದಂಥ ಮೂಢನಂಬಿಕೆಗಳ ಬಗ್ಗೆ ಚರ್ಚಿಸುವುದೇ ಅತ್ಯಂತ ಅಪಾಯಕಾರಿ ಬೆಳವಣಿಗೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಏನು ಏನು ನಡೆಯುತ್ತಿದೆ ಎಂದು ಕೆಲವು ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಒಂದು ಕೋಟಾ ನೋಟು, ನಮ್ಮ ಭಾಗದಲ್ಲಿ ಇದು ಅವ್ಯಾಯುತವಾಗಿ ನಡೆಯುತ್ತಿದೆ, ಇದು ಬಹಳಷ್ಟು ಜಾಸ್ತಿಯಾಗಿದೆ, ನಮ್ಮಲ್ಲಿ ಒರಿಜಿನಲ್ ನೋಟು ಹಿಡಿದುಕೊಂಡು ಹೋಗುವವರಿಗೂ ಹೆದರಿಕೆ ಶುರುವಾಗಿದೆ. ಒಂದು ನೋಟು ಸಿಕ್ಕರೂ ಹಿಡಿದು ಒಳಗೆ ಹಾಕುವ ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ಜಾಸ್ತಿಕ್ರಮ ತೆಗೆದುಕೊಳ್ಳಬೇಕು, ಬೆಂಗಳೂರು ಹಾಗೂ ಸುತ್ತಮುತ್ತ ನಡೆಯುವಂಥ ರೌಡಿಗಳ ಕಾಳಜಿ, ಇಲ್ಲಿ ಒಂದು ಅವರವರೊಳಗೆ ಯುದ್ಧವೇ ಶುರುವಾಗಿದೆ. ನಮಗೆ ಅವರಲ್ಲಿ ಯಾರು ಹೋದರು ಯಾರು ಹೋಗಲಿಲ್ಲ ಎಂದು ಬೇಸರದ ಸಂಗತಿಯಲ್ಲ, ಆದರೆ, ವಾತಾವರಣ ಹಾಳಾಗುತ್ತಿದೆ. ಮತ್ತೆ ಜನರಲ್ಲಿ ಭಯದ ವಾತಾವರಣ ಉಂಟಾಗುತ್ತಿದೆ. ಇದನ್ನು ನಿಲ್ಲಿಸತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡಬೇಕು. ಹಿಂದೆ ನಮ್ಮ ಭಾಗದಲ್ಲಿ ಸ್ಮಗ್‌ಲಿಂಗ್ ಹೆಚ್ಚಾಗಿತ್ತು. ಆ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಇಂಪೋರ್ಟೆಡ್ ಐಟಂಗಳನ್ನು ಫ್ರೀಯಾಗಿ ತರುವುದಕ್ಕೆ ಅವಕಾಶ ಕೊಟ್ಟಾಗ ಸ್ಮಗ್‌ಲಿಂಗ್ ನಡೆಯತಕ್ಕಂಥದು ನಿಂತು ಹೋಯಿತು. ಅನಂತರ ದಿನಗಳಲ್ಲಿ ಹವಾಲ ಪ್ರಾರಂಭವಾಯಿತು. ಇದು ಪ್ರಾರಂಭವಾದಾಗ ಡಾಲರನ್ನು ಫ್ರೀಯಾಗಿ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಟ್ಟರು. ಅನಂತರ ಹವಾಲ ವ್ಯವಹಾರ ಕೂಡ ನಿಂತುಹೋಯಿತು. ಇವತ್ತಿನ ದಿವಸ ಚಿಟ್ ಫಂಡ್, ರಿಯಲ್ ಎಸ್ಟೇಟ್ ವ್ಯವಹಾರ